ಮೂಲ ದಾವಾ ನಂಃ24/2024

ಪಿ.ಡಬ್ಲ್ಯೂಃ1

( ಇಂದು ದಿನಾಂಕಃ 01.10.2024 ರಂದು ವಾದಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ವಿ.ಎ.ಟಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ.

ನಾನು ಈ ದಾವೆಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

1. ಸರ್ವೆ ನಂ. 329/10 ರ ಪಹಣಿ ಪತ್ರಿಕೆ ನಿಪಿ-1,
2. ಸರ್ವೆ ನಂ. 329/6 ರ ಪಹಣಿ ಪತ್ರಿಕೆ ನಿಪಿ-2,
3. ಸರ್ವೆ ನಂ. 329/2 ಅ ರ ಪಹಣಿ ಪತ್ರಿಕೆ ನಿಪಿ-3,
4. ದಿಃ 12-06-2023 ರ ಕ್ರಯದ ಕರಾರು ಪತ್ರ ನಿಪಿ-4,
5. ದಿಃ 03-05-2024 ರ ವಕೀಲರ ನೋಟಿಸಿನ ಕಚೇರಿ ಪ್ರತಿ ನಿಪಿ-5,
6. ದಿಃ 16-05-2024 ರ ವಕೀಲರ ಉತ್ತರ ನೋಟಿಸು ನಿಪಿ-6,
7. ದಿಃ 29-05-2024 ರ ವಕೀಲರ ನೋಟಿಸಿನ ಕಚೇರಿ ಪ್ರತಿ ನಿಪಿ-7 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರು ಕಾಲವಕಾಶ ಕೋರಿದ್ದು ಆ ಪ್ರಕಾರ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಕಾರವಾರ.